ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

E-mail:Commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ:ಪಿಯು/30/ಸಿಬ್ಬಂದಿ/ಸಿಆರ್-10/ಎನ್ಒಸಿ/2018-19 ದಿನಾಂಕ:03-09-2018.

**ಜ್ಞಾಪನ**

**ವಿಷಯ:** ಶ್ರೀಮತಿ ಅರ್ಜುಮನ್ ಬಾನು ಎಸ್, ಉಪನ್ಯಾಸಕರು, ಇವರು ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿನ ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವ ಕುರಿತು.

**ಉಲ್ಲೇಖ:** ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಇವರ ಪತ್ರ ದಿನಾಂಕ: 12-09-2018. (ಸ್ವೀಕೃತಿ ದಿನಾಂಕ: 25-09-2018).

****

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೋಲಾರ, ಇಲ್ಲಿ ಸಮಾಜಶಾಸ್ತ್ರ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಅರ್ಜುಮನ್ ಬಾನು ಎಸ್, ಇವರು ಕೇಂದ್ರೀಯ ವಿಶ್ವವಿದ್ಯಾಲಯ, ನವದೆಹಲಿ, ಇಲ್ಲಿ ಕರೆದಿರುವ ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪತ್ರ ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಉಪನ್ಯಾಸಕರ ಹೆಸರಿನ ಮುಂದೆ ತೋರಿಸಿರುವ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿದೆ.

| ಕ್ರ.ಸ | ಹೆಸರು ಮತ್ತು ಕಾಲೇಜು ವಿಳಾಸ<br>ಶ್ರೀಮತಿ/ಶ್ರೀ | ಅನುಮತಿ ಕೋರಲಾದ ಹುದ್ದೆ |
|---|---|---|
| 1 | ಅರ್ಜುಮನ್ ಬಾನು ಎಸ್,<br>ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೋಲಾರ, ಕೋಲಾರ ಜಿಲ್ಲೆ. | ಕೇಂದ್ರೀಯ ವಿಶ್ವವಿದ್ಯಾಲಯ, ನವದೆಹಲಿ, ಇಲ್ಲಿ ಕರೆದಿರುವ ಪ್ರಾಂಶುಪಾಲರ ಹುದ್ದೆಗೆ |

ಷರತ್ತುಗಳು:

1. ಸದರಿ ಉಪನ್ಯಾಸಕರು, ಪರೀಕ್ಷೆಗೆ ಸಂಬಂಧಿಸಿದಂತೆ ಅಧ್ಯಯನವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕೈಗೊಳ್ಳತಕ್ಕದ್ದು. ಉಪನ್ಯಾಸಕರುಗಳು, ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ಸರ್ಕಾರ/ಇಲಾಖೆಗೆ ಯಾವುದೇ ಆರ್ಥಿಕ ಹೊರೆ ಉಂಟಾಗತಕ್ಕದ್ದಲ್ಲ.
2. ಸದರಿ ಉಪನ್ಯಾಸಕರುಗಳು, ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೊಂದರೆ ಉಂಟಾಗದಂತೆ ಬಿಡುವಿನ ವೇಳೆಯಲ್ಲಿ, ಪರೀಕ್ಷೆಯ ಅಧ್ಯಯನಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳತಕ್ಕದ್ದು.
3. ಸದರಿ ಉಪನ್ಯಾಸಕರುಗಳು, ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ವರ್ಗಾವಣೆ ಕೋರುವಂತಿಲ್ಲ ಅಥವಾ ಅವರ ಪರೀಕ್ಷೆಯ ಅಧ್ಯಯನ ಸರ್ಕಾರದ/ಇಲಾಖೆಯ ವರ್ಗಾವಣೆಗೆ ಅಡ್ಡಿ ಬರುವಂತಿಲ್ಲ.
4. ಸದರಿ ಉಪನ್ಯಾಸಕರುಗಳು ಬೇರೆ ಯಾವುದೇ ಇಲಾಖೆಯ ಹುದ್ದೆಗೆ ಆಯ್ಕೆಯಾದಲ್ಲಿ, ಈಗ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಹುದ್ದೆಯಿಂದ ಬಿಡುಗಡೆ ಹೊಂದುವ ಮೊದಲು ಇಲಾಖೆಯ ಅನುಮತಿ ಪಡೆಯತಕ್ಕದ್ದು.
5. ಸದರಿ ಹುದ್ದೆಯಲ್ಲಿ ತೇರ್ಗಡೆ ಹೊಂದಿದಲ್ಲಿ ಗ್ರೂಪ್ ಬಿ ಹುದ್ದೆಯ(ಉಪನ್ಯಾಸಕ)ವೇತನ ರಕ್ಷಣೆಯನ್ನು ಇಲಾಖೆ ನೀಡುವುದಿಲ್ಲ.

3/10/18

ಜಂಟಿ ನಿರ್ದೇಶಕರು(ಆಡಳಿತ).
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ- ಇವರಿಗೆ ಮಾಹಿತಿಗಾಗಿ.
2. ಸಹಾಯಕ ನಿರ್ದೇಶಕರು ಇ-ಆಡಳಿತ ಶಾಖೆ-ಅಂತರ್ ಜಾಲದಲ್ಲಿ ಅಳವಡಿಸಲು.
3. ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಇಗ್ಗಲೂರು, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
4. ಸಂಬಂಧಿಸಿದ ಉಪನ್ಯಾಸಕರಿಗೆ ಪ್ರಾಂಶುಪಾಲರ ಮುಖಾಂತರ.
5. ಕಛೇರಿ ಪ್ರತಿ.